## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-2006-07ನೇ ಸಾಲಿಗೆ ಹೆಚ್ಚುವರಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:-1.ಸರ್ಕಾರದ ಆದೇಶ ಸಂ:ಸಕಇ 34 ಮೊದೇಶಾ 2006, ದಿನಾಂಕ:17-6-2006.

2.ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,ಬೆಂಗಳೂರು ಇವರ ಪತ್ರ ಸಂ:ಕವಶಿಸಸ/ಸಿಆರ್(ಶಿಕ್ಷಣ)-1/06-07, ದಿನಾಂಕ:20-6-2006.

**ಪ್ರಸ್ತಾವನೆ:-**ಮೇಲೆ ಓದಲಾದ ಕ್ರಮಸಂಖ್ಯೆ(1)ರ ಸರ್ಕಾರದ ಆದೇಶದಲ್ಲಿ 2006-07ನೇ ಸಾಲಿಗೆ 45 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದವರಿಗಾಗಿ ಮಂಜೂರು ಮಾಡಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ(2)ರ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಬೆಂಗಳೂರು ಇವರು ಮಾನ್ಯ ಶಾಸಕರು ಹಾಗೂ ಜನಪ್ರತಿನಿಧಿಗಳಿಂದ ಹೆಚ್ಚಿನ ವಸತಿ ಶಾಲೆಗಳನ್ನು ಮಂಜೂರು ಮಾಡಲು ಕೋರಿ ಬೇಡಿಕೆ ಪತ್ರಗಳು ಹಾಗೂ ಮಾನ್ಯ ಸಚಿವರುಗಳಿಂದ ಶಿಫಾರಸ್ಸು ಪತ್ರಗಳು ಬಂದಿರುವುದರಿಂದ ಹಾಗೂ ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ 25 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆರೆಯಲು ಕೋರಿರುತ್ತಾರೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ 54 ಮೊದೇಶಾ 2006,**
**ಬೆಂಗಳೂರು,ದಿನಾಂಕ:3-1-2007.**

2006-07ನೇ ಸಾಲಿಗೆ ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪರಿಶಿಷ್ಟ ಜಾತಿಯ -10, ಪರಿಶಿಷ್ಟ ವರ್ಗ-5 ಮತ್ತು ಹಿಂದುಳಿದ ವರ್ಗದವರಿಗೆ-10ರಂತೆ ಒಟ್ಟು 25 ಹೆಚ್ಚುವರಿ ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಪ್ರಾರಂಭಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

**ಪರಿಶಿಷ್ಟ ಜಾತಿ**

| | | |
|---|---|---|
| 1. | ಬಿಜಾಪುರ | ಸಿಂಧಗಿ ಕ್ಷೇತ್ರದ ಗುಬ್ಬೇವಾಡ |
| 2. | ಕೊಪ್ಪಳ | ಕನಕಗಿರಿ |
| 3. | ಬಾಗಲಕೋಟೆ | ಬಾದಾಮಿ ಕ್ಷೇತ್ರದ ಚಿಕ್ಕಮುಚ್ಚಲಗುಡ್ಡ |
| 4. | ಬೆಳಗಾವಿ | ರಾಮದುರ್ಗ |
| 5. | ತುಮಕೂರು | ಕಳ್ಳಂಬೆಳ್ಳ ಕ್ಷೇತ್ರದ ಚಿಕ್ಕನಹಳ್ಳಿ |
| 6. | ಬಾಗಲಕೋಟೆ | ಮುದೋಳ ಕ್ಷೇತ್ರದ ಮೆಳ್ಳಿಗೇರಿ |
| 7. | ಗುಲ್ಬರ್ಗಾ | ಯಾದಗಿರಿ |
| 8. | ಬೆಳಗಾವಿ | ರಾಯಭಾಗ್ ಕ್ಷೇತ್ರದ ಹಾರೋಗೇರಿ |
| 9. | ಗುಲ್ಬರ್ಗಾ | ಅಫಜಲ್‌ಪುರ |
| 10. | ತುಮಕೂರು | ಶಿರಾ |

## ಪರಿಶಿಷ್ಟ ವರ್ಗ

| | | |
|---|---|---|
| 1. | ಉತ್ತರ ಕನ್ನಡ ಜಿಲ್ಲೆ | ಕಾರವಾರ ಕ್ಷೇತ್ರದ ಜೋಯಿಡಾ |
| 2. | ಚಾಮರಾಜನಗರ | ಕೊಳ್ಳೇಗಾಲ |
| 3. | ಬಳ್ಳಾರಿ | ಸಂಡೂರು |
| 4. | ಬಳ್ಳಾರಿ | ಹಡಗಲಿ ಕ್ಷೇತ್ರದ ಗಿರಿಯಾಪುರ ಮಠ |
| 5. | ಮೈಸೂರು | ಬನ್ನೂರು |

## ಹಿಂದುಳಿದ ವರ್ಗ

| ಕ್ರ.ಸಂ | ಜಿಲ್ಲೆ | ವಿಧಾನ ಸಭಾ ಕ್ಷೇತ್ರಗಳು |
|---|---|---|
| 1. | ಉತ್ತರ ಕನ್ನಡ ಜಿಲ್ಲೆ | ಭಟ್ಕಳ್ |
| 2. | ದಾವಣಗೆರೆ | ಹೊನ್ನಾಳಿ |
| 3. | ಚಿಕ್ಕಮಂಗಳುರು | ನರಸಿಂಹರಾಜಪುರ |
| 4. | ಕೊಪ್ಪಳ | ಕುಷ್ಟಗಿ ಕೇತ್ರದ ಕಾಟಾಪುರ |
| 5. | ಬೆಳಗಾವಿ | ಹುಕ್ಕೇರಿ ಕ್ಷೇತ್ರದ ಹೊಸೂರು |
| 6. | ಹಾವೇರಿ | ಹಾನಗಲ್ ಕ್ಷೇತ್ರದ ಯಳವಟ್ಟಿ |
| 7. | ದಾವಣಗೆರೆ | ಜಗಳೂರು |
| 8. | ಹಾಸನ | ಅರಸೀಕೆರೆ ಕ್ಷೇತ್ರದ ರಂಗಾಪುರ. |
| 9. | ಬೆಳಗಾವಿ | ಅರಭಾಂವಿ ಕ್ಷೇತ್ರದ ಯಾದವಾಡ |
| 10. | ಮಂಡ್ಯ | ಮದ್ದೂರು. |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: FD 345 EXP/3, 2006,ದಿ:12-12-2006 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

19-12-2006

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ,
ಮತ್ತು ಅವರ ಹೆಸರಿನಲ್ಲಿ.

(ಹೆಚ್ ಶೇಖರಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಗೆ,

1. ಮಹಾಲೇಖಪಾಲರು,ಕರ್ನಾಟಕ,ಬೆಂಗಳೂರು.
2. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು,ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ,
4. ನಿರ್ದೇಶಕರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,ಬೆಂಗಳೂರು.
5. ನಿರ್ದೇಶಕರು,ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ,ಬೆಂಗಳೂರು.
6. ಸಂಬಂಧಪಟ್ಟ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್
7. ಖಜಾನಾಧಿಕಾರಿಗಳು,ರಾಜ್ಯ ಹುಜೂರ ಖಜಾನೆ,ಬೆಂಗಳೂರು/ಸಂಬಂಧಪಟ್ಟ ಜಿಲ್ಲಾ ಖಜಾನಾಧಿಕಾರಿಗಳು
8. ಮಾನ್ಯ ಮುಖ್ಯಮಂತ್ರಿಯವರ ಆಪ್ತಕಾರ್ಯದರ್ಶಿ,ವಿಧಾನಸೌಧ,ಬೆಂಗಳೂರು.
9. ಮಾನ್ಯ ಉಪಮುಖ್ಯಮಂತ್ರಿಯವರ ಆಪ್ತಕಾರ್ಯದರ್ಶಿ,ಬೆಂಗಳೂರು.
10. ಮಾನ್ಯ ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ,ಬೆಂಗಳೂರು.
11. ಸರ್ಕಾರದ ಉಪಕಾರ್ಯದರ್ಶಿ-3.ಸಮಾಜ ಕಲ್ಯಾಣ ಇಲಾಖೆ.
12. ಸರ್ಕಾರದ ಅಧೀನ ಕಾರ್ಯದರ್ಶಿ-2 ಮತ್ತು 3,ಸಕಇ